ಮೂಗು ತೂರಿಸುವ ವಿಷಯದಲ್ಲಿ ಪತ್ರಕರ್ತರದೇ ಸಿಂಹಪಾಲು ಎನ್ನುವ ಬಗ್ಗೆ ನಮ್ ಸೀನ ಆಗಾಗ್ಗೆ ಮೂಗು ತೂರಿಸ್ಕಂಡು ಹೇಳ್ತಿರ್ತಾನೆ.

ನಮ್ಮ ಕಾಲದಲ್ಲಿ ಅಪ್ಪ ಅಮ್ಮನೋ, ಅಜ್ಜಿ ಅಜ್ಜನೋ, (ಪರಿಚಯದ ಅಥವಾ ಪರಿಚಯವಿಲ್ಲದ) ಯಾರಾದರು ಹಿರಿಯರೋ ಸಲಹೆ ಸೂಚನೆಗಳನ್ನು ಕೊಟ್ಟರೆ ಅದು ನಮ್ಮ ಒಳ್ಳೆಯದಕ್ಕೆ ತಾನೇ ಎಂದು ನಾವು ಸ್ವೀಕರಿಸುತ್ತಿದ್ದೆವು. ಆದರೆ ಎಂದಿಗೂ ಅದನ್ನು ತಪ್ಪಾಗಿ ತಿಳಿಯುತ್ತಿರಲಿಲ್ಲ. ಇಂದು ಹಾಗೇನಾದರೂ ಮಾಡುವುದಕ್ಕೆ ಹೋದರೆ ಅಧಿಕಪ್ರಸಂಗಿಗಳು ನಮ್ಮ ಸಂಸಾರದಲ್ಲಿ ಮೂಗು ತೂರಿಸಲು ಬರುತ್ತಾರೆ ಎಂದು ಅನ್ನಿಸಿಕೊಳ್ಳಬೇಕಾಗುತ್ತದೆ. ಮಕ್ಕಳಿರಲಿ, ಪುಟಾಣಿ ಮೊಮ್ಮಕ್ಕಳೂ ಕೇಳುವುದಿಲ್ಲ! ಇದು ನನ್ನ ಮಿತ್ರ ರಾಮಸ್ವಾಮಿಯ ಅನುಭವಕ್ಕೆ ಬಂದಿದ್ದು ಅವನ ಮಗಳು ಮೊಮ್ಮಗಳ ಜತೆ ವಿದೇಶಕ್ಕೆ ಹೊರಟು ನಿಂತಾಗ. ಅವರದೊಂದು ಕ್ಯಾಮೆರಾ ಇತ್ತು. ಚೆನ್ನಾಗಿಯೇ ಇತ್ತು. 'ಮಗು, ಕ್ಯಾಮೆರಾ ಮರೆತೇ ಬಿಟ್ಟಿಲ್ಲಾ, ಬ್ಯಾಗಿಗೆ ಹಾಕ್ಕೊ' ಎಂದು ಇವನು ಮೊಮ್ಮಗಳಿಗೆ ಕೊಡಲು ಹೋದಾಗ 'ಇದನ್ನ ಬೇಕಾದ್ರೆ ನೀನೇ ಇಟ್ಕೋ ತಾತ. ಅಮೆರಿಕದಲ್ಲಿ ಇನ್ನೂ ಲೇಟೆಸ್ಟ್ ಕ್ಯಾಮೆರಾಗಳು ಸಿಗುತ್ವೆ' ಎಂದು ವಾಪಸ್ ಕೊಡ್ತು ಮಗು! ಪರೋಕ್ಷವಾಗಿ ನಮ್ಮ ಪ್ಯಾಕಿಂಗ್ ನಮ್ಮದು, ನೀನು ಮೂಗು ತೂರಿಸೋದು ಬೇಡ ಎಂದ ಹಾಗಾಯಿತಂತೆ ರಾಮಸ್ವಾಮಿಗೆ!



ನಮ್ಮ ಸ್ನೇಹಿತರೊಬ್ಬರಿದಾರೆ. ಅವರಿಗೆ ಒಬ್ಬ ಆತ್ಮೀಯ ಸ್ನೇಹಿತರು. ದುರುದ್ದೇಶವಿಲ್ಲದಿದ್ದರೂ ಇವರ ಮನೆಯ ವಿಷಯಗಳಲ್ಲಿ ಮೂಗು ತೂರಿಸುವ ಚಟ ಅವರಿಗೆ. 'ಲೋ ಚಿದಾನಂದ, ಮೊನ್ನೆ ನೀನು ಆ ಕಡೆ ಹೋಗ್ತಿದ್ದ ಹಾಗೆ ನಿನ್ ಹೆಂಡ್ತಿ ಯಾವ್ದೋ ಕಾರಲ್ಲಿ ಕೂತ್ಗಂಡು ಹೋದ್ರಲ್ಲೊ, ಅದೂ ಮುಂದ್ಗಡೆ, ಡ್ರೈವರ್ ಪಕ್ಕದ ಸೀಟಲ್ಲಿ' ಎಂದು ಒಂದು ದಿನ ಆತನೆಂದಾಗ 'ನಾನು ಹೊರಗೆ ಹೋದ್ಮೇಲೆ ಅಲ್ವೋ ಶಂಕ್ರಾ, ಇದ್ದಾಗ್ಲೇ ಹೋಗಿದ್ದು. ಅವರ ಸಂಘದ ಮೀಟಿಂಗ್ ಇತ್ತು, ಇವ್ಳ ಜತೆ ಇನ್ನೂ ಮೂರ್ ಜನ ಇದ್ರು, ಅವ್ರನ್ನ ನೋಡ್ಲಿಲ್ವಾ ನೀನು?' ಎಂದು ನಗುತ್ತಲೇ ಇವರು ಕೇಳಿದರಂತೆ! ಮೂಗು ತೂರಿಸಲು ಬಂದವನ ಮುಖಕ್ಕೆ ಮಂಗಳಾರತಿ ಆಯಿತು!

ಈ ನಮ್ಮ ಮಿತ್ರರು ಸ್ವಉದ್ಯೋಗದಲ್ಲಿ ತೊಡಗಿಕೊಂಡವರು. ಅದರ ಸಲುವಾಗಿ ಊರೂರು ತಿರುಗಬೇಕಾಗುತ್ತದೆ. ಒಮ್ಮೊಮ್ಮೆ ಪರ ಊರಿಗೆ ಹೋದರೆ ಕೆಲವು ದಿನ ಮನೆಗೆ ಬರಲಾಗುವುದಿಲ್ಲ. ಆ ಮಿತ್ರ ಇವರ ಪತ್ನಿಯ ಬಳಿ 'ಏನ್ರೀ, ಚಿದಾನಂದಂಗೆ ಅಷ್ಟೊಂದು ಕೆಲಸವಾ? ಒಂದು ವಾರದಿಂದ ಮನೆಗೇ ಬಂದ ಹಾಗಿಲ್ಲಾ. ನಾನೂ ಅತ್ಲಾಗೆ ಈ ಪೋಸ್ಟ್ ಆಫೀಸ್ ಕೆಲ್ಸ ಬಿಟ್ಟು ಇವನ ಪಾರ್ಟ್ನರ್ ಆಗ್ತೀನಪ್ಪಾ' ಎಂದಾಗ ಇವರು ಏನು ಹೇಳಲು ಸಾಧ್ಯ?

ಪಕ್ಕದ ಮನೆಯಾಕೆಯೂ ಏನು ಕಡಿಮೆಯಿಲ್ಲ. ಇವರ ಪತ್ನಿಯ ಬಳಿ ಬಂದು 'ರೀ ಸಾವಿತ್ರಿ, ನೀವು ಸ್ಕೂಲಿಗೆ ಹೋಗಿದ್ರಲ್ಲಾ, ಆಗ ನಿಮ್ ಮನೆಗೆ ನಾಲ್ಕೈದು ಹುಡುಗ್ರು ಬಂದಿದ್ರು ಕಣ್ರೀ' ಎಂದರೊಮ್ಮೆ.

'ಹೌದು, ನಮ್ ಮಗ ಹೇಳಿದ್ದ ಫ್ರೆಂಡ್ಸನ್ನ ಕರ್ಕಂಡು ಬರ್ತೀನಮ್ಮ ಅಂತ' ಇವರು ಕೂಲಾಗಿ ಹೇಳಿದಾಗ ಅವರಿಗೆ ನಿರಾಸೆ, ಇವರು ಕುತೂಹಲವೇ ತೋರಿಸಲಿಲ್ವಲ್ಲ ಅಂತ. 'ಹಾಗಲ್ರೀ, ಆ ಪೈಕಿ ಒಂದು ಹುಡುಗೀನೂ ಇದ್ಲು' ಅವರು ಬಿಡುವ ಹಾಗೆ ಕಾಣುವುದಿಲ್ಲ.


'ಅವರ ಕಾಲೇಜಲ್ಲಿ ಹುಡುಗೀರೂ ಇದಾರೆ. ಕೋ ಎಡ್ ಕಾಲೇಜಲ್ವೇ ಅದು?' ಇವರೂ ತಮಾಷೆಯಾಗಿ ತೆಗೆದುಕೊಂಡರೆ ಅವರಿಗೆ ಮತ್ತಷ್ಟು ಅಸಮಾಧಾನ. 'ಥೂ ಹೋಗ್ರೀ, ಸೀರಿಯಸ್ ಆಗಿ ತಗಳದೇ ಇಲ್ಲ ನೀವು. ನಿಮ್ ಹತ್ರ ಹೇಳಿ ಪ್ರಯೋಜ್ನ ಇಲ್ಲ' ಎನ್ನುತ್ತಾ ಅವರು ನಿರ್ಗಮಿಸುತ್ತಾರೆ!

ಮದುವೆಯ ವಯಸ್ಸಿನ ಹೆಣ್ಣು ಮಕ್ಕಳಿದ್ದ ಮನೆಯಾದರಂತೂ ಅಕ್ಕಪಕ್ಕದವರಿಗೆ ಅತೀವ ಕುತೂಹಲ. ಮನೆಯ ಮುಂದೆ ಯಾವುದೇ ವಾಹನ ಬಂದು ನಿಂತರೂ ಹುಡುಗೀನ ನೋಡಲು ಬಂದವರು ಎನ್ನುವ ತೀರ್ಮಾನಕ್ಕೇ ಬಂದುಬಿಡುತ್ತಾರೆ. ಅವರು ಆ ಕಡೆ ಹೋಗೋದೇ ತಡ, ವಿಚಾರಣೆಗೆ ಶುರು. ಯಾರು? ಎಲ್ಲಿಯವರು? ಹುಡುಗ ಏನ್ಮಾಡ್ಕೊಂಡಿದಾನೆ? ಏನಂದ್ರು? ಇವರಿಗೋ ಸಮಜಾಯಿಷಿ ಕೊಡೋದ್ರಲ್ಲಿ ಸುಸ್ತಾಗಿ ಬಿಡುತ್ತೆ. 'ಅವರು ಹಿಂದೆ ನಮ್ಮ ಮನೆ ಪಕ್ಕದಲ್ಲಿದ್ದ ಆತ್ಮೀಯರು. ಈಗ ಬೆಂಗಳೂರಲ್ಲಿ ಇದಾರೆ. ಇಲ್ಲಿ ಏನೋ ಫಂಕ್ಷನ್ ಇತ್ತು ಅಂತ ಬಂದಿದ್ರು. ಹಾಗೇ ಮನೆಗೆ ಬಂದು ಹೋದ್ರು' ಎಂದು ಹೇಳಿದಾಗ 'ಓ ಹಾಗೋ' ಎನ್ನುತ್ತಾ ಮುಖ ಬಾಡಿಸಿಕೊಂಡು ತೆರಳುತ್ತಾರವರು!

ಮೊನ್ನೆ ಎಲ್ಲೋ ಓದಿದ್ದೆ 'ಚಂದ್ರನು ಕುಂಭ ರಾಶಿಯಿಂದ ಶನಿವಾರ ಮೀನ ರಾಶಿಯನ್ನು ಪ್ರವೇಶಿಸುತ್ತಾನೆ. ಇದರಿಂದಾಗಿ ಮೇಷ, ಕನ್ಯಾ, ಧನಸ್ಸು, ಕುಂಭ ರಾಶಿಯವರಿಗೆ ಇಂದು ಅನೇಕ ಒತ್ತಡಗಳು ಆವರಿಸುವ ಸಾಧ್ಯತೆ ಇದೆ. ವೃಷಭ ರಾಶಿಯವರಿಗೆ ಆರೋಗ್ಯದ ಕುರಿತು ವಿಶೇಷ ಕಾಳಜಿ ಅವಶ್ಯಕವಿದೆ. ಈ ಎಲ್ಲಾ ರಾಶಿಯವರರು ವಿನಾಕಾರಣ ಎಲ್ಲದಕ್ಕೂ ಮೂಗು ತೂರಿಸುವುದು ಬೇಡ. ಕುಟುಂಬದಲ್ಲಿ ಭಿನ್ನಾಭಿಪ್ರಾಯ ಮೂಡದಂತೆ ಎಚ್ಚರಿಕೆ ಇರಲಿ. ಕನ್ಯಾ ರಾಶಿಯ ಉದ್ಯೋಗಿಗಳಿಗೆ ಜವಾಬ್ದಾರಿಗಳಿಂದಾಗಿ ಒತ್ತಡ ಹೆಚ್ಚಾಗಲಿದ್ದು, ಕೋಪದಿಂದ ವರ್ತಿಸುವ ಸಾಧ್ಯತೆ ಇದೆ. ಆತುರದಲ್ಲಿ ಮಾತುಗಳು ಬೇಡ. ಇತ್ಯಾದಿ, ಇತ್ಯಾದಿ' ಈ ಭವಿಷ್ಯ ಬರೆಯೋರಿಗೂ ಬೇರೆಯವರ ಜೀವನದ ಆಗುಹೋಗುಗಳ ನಡುವೆ ಮೂಗು ತೂರಿಸುವ ಖಯಾಲಿಯೇನೋ ಅನ್ನಿಸಿತು.

ನಮ್ಮ ಮನೆಯ ಪಕ್ಕದ ರಸ್ತೆಗೆ ಚರಂಡಿ ಮಾಡಲು ಸರ್ವೆ ಮಾಡುತ್ತಿದ್ದರು. ಆ ಏರಿಯಾದ ಕೌನ್ಸಿಲರ್ ಜತೆಗೆ ನಾಲ್ಕಾರು ಜನ ನಿಂತು ಮಾತನಾಡುತ್ತಿದ್ದರು. ಆಗ ಚರಂಡಿಯಿಂದ ಬರೋ ಕೆಟ್ಟ ವಾಸನೆಯ ಬಗ್ಗೆ ಒಬ್ಬ ಮಹಿಳೆ ದೂರು ಹೇಳುತ್ತಿದ್ದರು. ಎಲ್ಲಾ ಕಡೆ ಮೂಗು ತೂರಿಸುವ ಚಾಳಿಯ ಸುಕನ್ಯಾ ಆಂಟಿಗೆ ಸುಮ್ಮನಿರಲಾದೀತೇ? ಮಧ್ಯೆ ಬಾಯಿ ಹಾಕಿ ಅವರಿಗೆ ಸಪೋರ್ಟ್ ಮಾಡೋ ತರಹ 'ಹೂನ್ರೀ ಶಾಂತಮ್ಮ, ಆ ಸ್ಕೂಲ್‌ನವರದ್ದೇ ಗಲೀಜು ವಾಸನೆ. ಸರಿಯಾಗಿ ಇಟ್ಕೋಬಾರ್ದೇ?' ಎಂದು ಜೋರಾಗಿ ಮಾತಾಡಿಬಿಟ್ಟರು. ಕೌನ್ಸಿಲರ್ ತಮ್ಮನೇ ಆ ಸ್ಕೂಲಿನ ಅಧ್ಯಕ್ಷರು ಅನ್ನುವುದನ್ನು ಅವರು ಮರೆತುಬಿಟ್ಟಿದ್ದರು. ಶಾಂತಮ್ಮ ಪಕ್ಕೆ ತಿವಿದು ನೆನಪಿಸಿದಾಗ, ಬೆಬ್ಬೆಬ್ಬೆ ಎಂದು ತೊದಲ್ತಾ ಮನೆ ಕಡೆ ಓಡಿಬಿಟ್ಟರು!

ಸಂಜೆ ವಾಕ್ ಮುಗಿಸಿ ಮನೆಯ ಕಡೆ ಬರ್ತಾ ಇದ್ದೆ. ನಾಲ್ಕೈದು ಮಹಿಳಾಮಣಿಗಳು ನಡುರಸ್ತೆಯಲ್ಲಿ ಅಕ್ಕಪಕ್ಕದಲ್ಲಿಯೇ ನಡೆಯುತ್ತಾ ಮಾತಾಡ್ಕೊಂಡು ಬರುತ್ತಿದ್ದರು. ಅರ್ಧ ರಸ್ತೆಯನ್ನೇ ಅವರು ಆಕ್ರಮಿಸಿಕೊಂಡುಬಿಟ್ಟಿದ್ದರು. 'ನೀವು ನಮ್ಮ ಹಳೆಮನೆಗೆ ಬಂದಿದ್ರೀ, ಹೊಸ ಮನೆಗೆ ಬಂದೇ ಇಲ್ಲ' ಎಂದು ಒಬ್ಬಾಕೆ ಮತ್ತೊಬ್ಬರಿಗೆ ಹೇಳುತ್ತಿದ್ದರು. ಬೈಕ್ ಸವಾರನೊಬ್ಬ ಬಂದು ಇದ್ದಕ್ಕಿದ್ದಂತೆ ಬ್ರೇಕ್ ಹಾಕಿ ನಿಲ್ಲಿಸಿ 'ಆಂಟಿ, ನೀವು ಹೀಗೆ ರಸ್ತೆ ಮಧ್ಯೆ ಮಾತಾಡ್ತಾ ಹೋದ್ರೆ ಹಳೆ ಮನೆಗೂ ಹೋಗಲ್ಲ, ಹೊಸ ಮನೆಗೂ ಹೋಗಕ್ಕಾಗಲ್ಲ. ಸೀದಾ ಆಸ್ಪತ್ರೆಗೆ ಹೋಗ್ಬೇಕಾಗುತ್ತೆ' ಅಂದುಬಿಟ್ಟ! ಬಂತು ನೋಡಿ ಸಿಟ್ಟು ಆಕೆಗೆ. 'ಬಂದ್ಬಿಟ್ಟ ಮೂಗು ತೂರಿಸ್ಕಂಡು. ಅಪಶಕುನದ ಮಾತಾಡ್ತೀಯಲ್ಲೋ. ನಿನ್ನ ಬೈಕಲ್ಲಿ ಹಾರ್ನ್ ಏನು ಕೆಟ್ಟೋಗಿದ್ಯೇ? ಹಾರ್ನ್ ಮಾಡಿದ್ರೆ ದಾರಿ ಬಿಡ್ತಿರ್ಲಿಲ್ವೇ? ದೊಡ್ಡೋರು ಚಿಕ್ಕೋರು ಅನ್ನೋ ಪ್ರಜ್ಞೆ ಬೇಡ್ವೇನೋ ಮುಂಡೇದೇ?' ಇನ್ನೂ ಏನೇನು ಬೈಗುಳು ಬರ್ತಿತ್ತೋ ಅವರ ಬಾಯಲ್ಲಿ. ನಾನು ಸನ್ನೆ ಮಾಡ್ದೆ 'ತೆಪ್ಪಗೆ ಗಾಡಿ ಎತ್ಕೊಂಡು ಗಾಡಿ ಬಿಡು. ಇಲ್ಲಾಂದ್ರೆ ಗ್ರಾಚಾರ ಬಿಡಿಸ್ಬಿಡ್ತಾರೆ' ಅಂತ. ಅವ್ನು ಬೈಕ್ ಸ್ಟಾರ್ಟ್ ಮಾಡ್ಕೊಂಡು ಬುರ್ರಂತ ಹೊರಟುಹೋದ. ಆಮೇಲೂ ಆಕೆಯ ಬೈಗುಳದ ಪ್ರವಾಹ ನಿಂತಿರಲೇ ಇಲ್ಲ. ಇನ್ನು ಅಲ್ಲಿದ್ದರೆ ನನ್ನ ಕಡೆಗೆ ಅವರ ಗಮನ ಹೊರಳಿದರೇನು ಗತಿ ಎಂದು ನಾನೂ ಅಲ್ಲಿಂದ ಕಾಲ್ಕಿತ್ತೆ!



ಉದ್ದ ಮೂಗಿದ್ದವರು ಬೇರೆಯವರ ವಿಷಯದಲ್ಲಿ ಹೆಚ್ಚು ತೂರಿಸ್ತಾರೆ ಅನ್ನುವ ಹಾಗೇನಿಲ್ಲ. ಮೂಗು ತೂರಿಸುವುದಕ್ಕೂ ಮೂಗಿನ ಉದ್ದಕ್ಕೂ ಅರ್ಥಾತ್ ಸಂಬಂಧವಿಲ್ಲ ಎನ್ನುವುದನ್ನು ಸಂಶೋಧನೆಗಳು ತೋರಿಸಿಕೊಟ್ಟಿವೆ! ಮೂಗು ತೂರಿಸುವುದರ ಬಗ್ಗೆ ಬರೆಯುತ್ತಾ ಹೋದರೆ ಅದೊಂದು ಮಹಾ ಪ್ರಬಂಧವೇ ಆದೀತು. ನಮ್ಮ ವಿಷಯದಲ್ಲಿ ನೀನ್ಯಾಕೆ ಅನಗತ್ಯವಾಗಿ ಮೂಗು ತೂರಿಸ್ತಾ ಇದೀಯಾ ಎಂದು ಯಾರಾದ್ರೂ ಮೂಗು ತೂರಿಸುವ ಚಾಳಿಯ ಓದುಗರು ಹೇಳುವ ಮೊದಲು ಇಲ್ಲಿಗೆ ನಿಲ್ಲಿಸಿಬಿಡುತ್ತೇನೆ!

ಪ್ರತಿಕ್ರಿಯಿಸಿ: feedback@sudha.co.in